# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜೂನ್ 22, 2022

ಸಂಪುಟ : 49 ಸಂಚಿಕೆ : 39 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಆರೋಗ್ಯ, ಆರ್ಥಿಕತೆ ಸುಧಾರಣೆಗೆ ಯೋಗ ಅಗತ್ಯ

## ಸಂತೆಬೆನ್ನೂರು ಪುಷ್ಕರಣಿ ಆವರಣದಲ್ಲಿನ ಯೋಗ ದಿನಾಚರಣೆಯಲ್ಲಿ ಸಂಸದ ಸಿದ್ದೇಶ್ವರ

ದಾವಣಗೆರೆ, ಜೂ.21 - ರಾಜ್ಯದಲ್ಲಿ ಸುಮಾರು ಮೂರು ಕೋಟಿಗಿಂತಲೂ ಹೆಚ್ಚು ಜನರು ಬಿ.ಪಿ, ಶುಗರ್ ಕಾಯಿಲೆಗೆ ಔಷಧಿ ಸೇವಿಸುತ್ತಿದ್ದಾರೆ. ಔಷಧಿಗೆ ಹಾಕುವ ಹಣ ನಿಂತರೆ ಸಾಕು. ನಮ್ಮ ಆರ್ಥಿಕ ಸ್ಥಿತಿ ಸುಧಾರಣೆ ಆಗಲಿದೆ. ಈ ನಿಟ್ಟಿನಲ್ಲಿ ನಾವುಗಳು ನಿರೋಗಿಗಳಾಗಲು ಯೋಗಾಭ್ಯಾಸವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಂಸದ ಡಾ.ಜಿ.ಎಂ. ಸಿದ್ದೇಶ್ವರ ಕರೆ ನೀಡಿದರು.

ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರಿನ ಐತಿಹಾಸಿಕ ಸ್ಥಳವಾದ ಪುಷ್ಕರಣಿಯ ಆವರಣದಲ್ಲಿ ಜಿಲ್ಲಾಡಳಿತ, ಜಿ.ಪಂ., ಆಯುಷ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ 'ಮಾನವೀಯತೆಗಾಗಿ ಯೋಗ' ಘೋಷ ವಾಕ್ಯದಡಿ ಆಯೋಜಿಸಿದ್ದ 8ನೇ ಅಂತರ್ ರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯೋಗ ಎನ್ನುವುದು ಪುರಾತನ ಕಾಲದಿಂದ ಬಂದಿದ್ದು, ಸ್ವಾತಂತ್ರ್ಯ ಬಂದ ನಂತರ ಇದನ್ನು ಕಡೆಗಣಿಸಿದ್ದರು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಜೂನ್ 21 ರಂದು ಅಂತರ್ ರಾಷ್ಟ್ರೀಯ ಯೋಗ ದಿನಾಚರಣೆಯನ್ನು ನಡೆಸಿಕೊಂಡು (2ನೇ ಪುಟಕ್ಕೆ)



ಸಂತೇಬೆನ್ನೂರು ಪುಷ್ಕರಣಿ ಆವರಣದಲ್ಲಿ ಸಂಸದ ಸಿದ್ದೇಶ್ವರ ಹಾಗೂ ಅಧಿಕಾರಿಗಳಿಂದ ಯೋಗ



ದಾವಣಗೆರೆ ಆಫೀಸರ್ಸ್ ಕ್ಲಬ್‌ನ ಈಜುಕೊಳದಲ್ಲಿ ಯೋಗ ಪಟುಗಳಿಂದ ಜಲಯೋಗ

## ಗಮನ ಸೆಳೆದ ಜಲಯೋಗ

### 26 ಯೋಗ ಪಟುಗಳಿಂದ ಜಲ ಯೋಗ ಪ್ರದರ್ಶನ

ದಾವಣಗೆರೆ, ಜೂ. 21- ವಿಶ್ವ ಯೋಗ ದಿನಾಚರಣೆ ಅಂಗವಾಗಿ ಮಂಗಳವಾರ ನಗರದ ಆಫೀಸರ್ಸ್ ಕ್ಲಬ್‌ನ ಈಜುಕೊಳದಲ್ಲಿ ಜಿಲ್ಲಾಡಳಿತ, ಆಯುಷ್ ಇಲಾಖೆ ಹಾಗೂ ಜಿಲ್ಲಾ ಯೋಗ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಜಲ ಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಏಳು ವರ್ಷದ ಬಾಲಕಿ ಮಿಥಿಲಾ ಗಿರೀಶ್ ಆದಿಯಾಗಿ 82 ವರ್ಷದ ವೃದ್ಧೆ ಇಂದಿರಾ ಸೇರಿದಂತೆ 26 ಜನ ಯೋಗಪಟುಗಳು ವಿವಿಧ ಭಂಗಿಗಳಲ್ಲಿ ಜಲ ಯೋಗ ಪ್ರದರ್ಶಿಸಿದರು.

ಈಜುಕೊಳದ ನೀರಿನಲ್ಲಿ ಪದ್ಮಾಸನ, ಪದ್ಮ ಚಕ್ರ, ಕಾಲ ಚಕ್ರ, ಕಾಲದ ಚಕ್ರ, (2ನೇ ಪುಟಕ್ಕೆ)

# ಯೋಗದಿಂದ ಮನಸ್ಸಿಗೆ ವಿಶ್ವಕ್ಕೆ ಶಾಂತಿ: ಮೋದಿ

## ಮೈಸೂರಿನಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ

ಮೈಸೂರು, ಜೂ. 21 – ದೇಶಾದ್ಯಂತ ಯೋಗ ದಿನಾಚರಣೆ ಉತ್ಸಾಹದಿಂದ ಆಚರಿಸಲಾಗಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೈಸೂರು ಅರಮನೆ ಮೈದಾನದಲ್ಲಿ ಸಾವಿರಾರು ಜನರ ಜೊತೆ ಯೋಗಾಭ್ಯಾಸ ಮಾಡಿದ್ದು ದಿನದ ಆಕರ್ಷಣೆಯಾಗಿತ್ತು.

ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಯೋಗದಿಂದ ನಮ್ಮ ವಿಶ್ವಕ್ಕೆ ಶಾಂತಿ ಹಾಗೂ ಮಾನವೀಯತೆಗೆ ಆರೋಗ್ಯಕರ ಜೀವನದ ಆಶಾಭಾವನೆ ದೊರೆಯುತ್ತದೆ ಎಂದರು.

ಯೋಗದಿಂದ ನಮಗೆ ಶಾಂತಿ ಸಿಗುತ್ತದೆ. ಯೋಗದಿಂದ ವ್ಯಕ್ತಿಗಳಿಗಷ್ಟೇ ಅಲ್ಲದೇ ನಮ್ಮ ಸಮಾಜಕ್ಕೆ, ದೇಶಕ್ಕೆ ಹಾಗೂ ವಿಶ್ವಕ್ಕೆ ಶಾಂತಿ ಸಿಗುತ್ತದೆ ಎಂದು ಋಷಿ ಮುನಿಗಳು ತಿಳಿಸಿದ್ದಾರೆ ಎಂದು ಪ್ರಧಾನಿ ಹೇಳಿದರು.

ಇಲ್ಲಿನ ಅಂಬಾ ವಿಲಾಸ ಅರಮನೆಯಲ್ಲಿ ಆಯೋಜಿಸಲಾಗಿದ್ದ ಬೃಹತ್ ಯೋಗ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಇದು ಅತಿರಂಜಿತ ವಿಚಾರ ಎಂದು ಅನ್ನಿಸಬಹುದು. ಆದರೆ, ಸರಳ ಮಂತ್ರಗಳೊಂದಿಗೆ ಋಷಿಗಳು ಉತ್ತರ ನೀಡಿದ್ದಾರೆ. ಇಡೀ ವಿಶ್ವ ನಮ್ಮ ದೇಹ ಹಾಗೂ ಆತ್ಮದಿಂದ ಆರಂಭವಾಗುತ್ತದೆ. ವಿಶ್ವ ನಮ್ಮಿಂದಲೇ (2ನೇ ಪುಟಕ್ಕೆ)



# ಪೌಷ್ಠಿಕತೆಗೆ ಅಕ್ಕಿಯ ಸಾರವರ್ಧನೆ

## ಹೆಣ್ಣು ಮಕ್ಕಳು, ಬಾಣಂತಿಯರು, ಮಕ್ಕಳಿಗೆ ಸಾವರ್ಧಿತ ಅಕ್ಕಿಯಿಂದ ಹೆಚ್ಚಿನ ಪೌಷ್ಠಿಕಾಂಶ : ಎಡಿಸಿ ಪಿ.ಎನ್ ಲೋಕೇಶ್

ದಾವಣಗೆರೆ ಜೂ.21 - ಸರ್ಕಾರ ಪಡಿತರ ಮೂಲಕ ನೀಡುವ ಸಾರವರ್ಧಿತ ಅಕ್ಕಿಯಿಂದ ಯಾವುದೇ ಅನಾಹುತ ಉಂಟಾಗುವುದಿಲ್ಲ. ಜನರು ಭಯ-ಆತಂಕಗಳನ್ನು ತಲೆಯಿಂದ ದೂರ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ಹೇಳಿದರು.

ಮಂಗಳವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನ್ಯಾಯ ಬೆಲೆ ಅಂಗಡಿ ಮಾಲೀಕರಿಗೆ ಹಾಗೂ ಕಾರ್ಡುದಾರರಿಗೆ ಆಯೋಜಿಸಲಾಗಿದ್ದ ಸಾರವರ್ಧಿತ ಅಕ್ಕಿಯ ಸಂವೇದನಾಶೀಲತೆಯ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪೌಷ್ಟಿಕ ಆಹಾರ ಒದಗಿಸುವ ಸಲುವಾಗಿ ಈಗಾಗಲೇ ವಿತರಣೆ ಮಾಡುತ್ತಿರುವ ಅಕ್ಕಿಗೆ ಸಾರವರ್ಧಿತ ಅಕ್ಕಿಯನ್ನು ಬೆರೆಸಲಾಗುತ್ತಿದೆ. ಹೆಣ್ಣು ಮಕ್ಕಳು, ಬಾಣಂತಿಯರು, ಮಕ್ಕಳಿಗೆ ಹೆಚ್ಚಿನ ಪೌಷ್ಠಿಕ ಆಹಾರ (5ನೇ ಪುಟಕ್ಕೆ)

# ರಾಷ್ಟ್ರಪತಿ ಚುನಾವಣೆ : ಎನ್.ಡಿ.ಎ. ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು



## ಮೊದಲ ಬಾರಿಗೆ ಬುಡಕಟ್ಟು ಮಹಿಳೆ ರಾಷ್ಟ್ರಪತಿಯಾಗುವ ಹಾದಿ ಸ್ಪಷ್ಟ

ನವದೆಹಲಿ, ಜೂ. 21 – ಮಾಜಿ ರಾಜ್ಯಪಾಲರಾದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಚುನಾವಣೆಯ ಅಭ್ಯರ್ಥಿ ಮಾಡಲು ಬಿಜೆಪಿ ನೇತೃತ್ವದ ಎನ್.ಡಿ.ಎ. ನಿರ್ಧರಿಸಿದೆ.

ಜಾರ್ಖಂಡ್ ರಾಜ್ಯಪಾಲರಾಗಿ ಕಾರ್ಯ ನಿರ್ವಹಿಸಿದ್ದ ಮುರ್ಮು ಅವರು, ಜೂನ್ 25ರಂದು ನಾಮಪತ್ರ ಸಲ್ಲಿಸುವ ಸಾಧ್ಯತೆ ಇದೆ. ಅವರು ಒಡಿಶಾ ರಾಜ್ಯದವರಾಗಿದ್ದಾರೆ. ಇದೇ ಮೊದಲ ಬಾರಿಗೆ ಬುಡಕಟ್ಟು ಮಹಿಳೆ ಯನ್ನು ಅಭ್ಯರ್ಥಿಯನ್ನಾಗಿ ಮಾಡಲಾಗಿದೆ. ದ್ರೌಪದಿ ಮುರ್ಮು ಅವರು ಮುಂಬರುವ ರಾಷ್ಟ್ರಪತಿ ಚುನಾವಣೆಗೆ ಎನ್.ಡಿ.ಎ. ಅಭ್ಯರ್ಥಿಯಾಗಲಿದ್ದಾರೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ತಿಳಿಸಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ರಾಷ್ಟ್ರಪತಿ ಸ್ಥಾನಕ್ಕೆ 20 ಅಭ್ಯರ್ಥಿಗಳ (2ನೇ ಪುಟಕ್ಕೆ)

## ಕಿರಿದಾದ ರಸ್ತೆ: ಭಾರೀ ವಾಹನಗಳ ಅತೀ ಸಂಚಾರದ ಕಿರಿಕಿರಿ

# ರೊಚ್ಚಿಗೆದ್ದ ಬಡಾವಣೆ ನಾಗರಿಕರು ವಾಹನಗಳನ್ನು ತಡೆದು ಆಕ್ರೋಶ

ದಾವಣಗೆರೆ, ಜೂ.21- ಕಿರಿದಾದ ರಸ್ತೆಯಲ್ಲಿ ಭಾರಿ ವಾಹನಗಳ ಅತಿಯಾದ ಸಂಚಾರದ ಕಿರಿಕಿರಿ, ವಾಹನಗಳ ಅತಿಯಾದ ಓಡಾಟದಿಂದ ಹಾಳಾದ ರಸ್ತೆ, ರಸ್ತೆ ಕಿರಿದಾದ ತಿರುವಿನಲ್ಲಿ ಸಂಚರಿಸುವಾಗ ವಾಹನಗಳ ಗದ್ದಲ, ಹಾರ್ನ್ ಸದ್ದು. ಇದರಿಂದ ಓಡಾಟಕ್ಕೆ ತೊಂದರೆ, ನೆಮ್ಮದಿ ಭಂಗವನ್ನು ಸಹಿಸಿಕೊಂಡಿದ್ದ ಇಲ್ಲಿನ ನಗರ ಪಾಲಿಕೆ ವ್ಯಾಪ್ತಿಯ 32ನೇ ವಾರ್ಡಿನ ರಾಜೇಂದ್ರ ಬಡಾವಣೆಯ ನಾಗರಿಕರು ಇಂದು ಒಮ್ಮೆಲೆ ತಮ್ಮ ಆಕ್ರೋಶವನ್ನು ಹೊರಹಾಕಿದರು.





ಬಡಾವಣೆಯಲ್ಲಿ ಅತಿಯಾದ ಭಾರೀ ವಾಹನಗಳ ಓಡಾಟ, ನಿರಂತರ ವಾಹನಗಳ ಸಂಚಾರದ ಕಿರಿಕಿರಿಯಿಂದ ಬೇಸತ್ತಿದ್ದ ನಾಗರಿಕರು ದಿಢೀರನೆ ರಸ್ತೆಗಿಳಿದು ನಗರ ಸಾರಿಗೆ ಬಸ್ ಸೇರಿದಂತೆ ಭಾರೀ ವಾಹನಗಳ ಸಂಚಾರ ತಡೆದು ಅಸಮಾಧಾನ ವ್ಯಕ್ತಪಡಿಸಿದರು.

ಡಿಸಿಎಂ ಟೌನ್ ಶಿಪ್ ನಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಕೈಗೊಂಡು ನಾಲ್ಕು ತಿಂಗಳು ಕಳೆದರೂ ಕಾಮಗಾರಿ ಮಂದಗತಿಯಿಂದ ಸಾಗುತ್ತಿದ್ದು, ಮಳೆ ನೀರು ಹೋಗುವಂತೆ ಚರಂಡಿ ಡೆಕ್ ಸ್ಲಾಬ್ ನಿರ್ಮಿಸಲು ರಸ್ತೆಯಲ್ಲಿ ಗುಂಡಿ ತೋಡಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಈ ರಸ್ತೆ ಬದಲಿಗೆ 32ನೇ ವಾರ್ಡಿನ ರಾಜೇಂದ್ರ ಬಡಾವಣೆಯ ಎಸ್ಸಿ ಎಸ್ಟಿ ಹಾಸ್ಟೆಲ್ ಮೂಲಕ ಡಿಸಿಎಂ ಸಾಗಲು ಪರ್ಯಾಯ ಮಾರ್ಗದಲ್ಲಿ ನಗರ ಸಾರಿಗೆ ಬಸ್‌ಗಳು ಸೇರಿದಂತೆ ಎಲ್ಲಾ ವಾಹನಗಳು ಸಂಚರಿಸುತ್ತಿವೆ. ಅತಿಯಾದ ಭಾರೀ ವಾಹನಗಳ ಓಡಾಟದಿಂದ ರಾಜೇಂದ್ರ ಬಡಾವಣೆಯ ರಸ್ತೆ ಸಂಪೂರ್ಣ ಹಾಳಾಗಿವೆ. ಅಲ್ಲದೇ ವೇಗದ ಸಂಚಾರದಿಂದಾಗಿ ಸ್ಥಳೀಯರು, (2ನೇ ಪುಟಕ್ಕೆ)

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಎಸ್.ಬಿ. ಅರ್ಪಿತ ಬಿನ್ ಬಸವರಾಜಪ್ಪ, ವಾಸ: ಡಾಲರ್ಸ್ ಕಾಲೋನಿ, ಶಾಮನೂರು ವಿಭಾಗ, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಮೇಲ್ಕಂಡ ನನ್ನ ಕಕ್ಷಿದಾರರು ದಾವಣಗೆರೆಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ.122/2021 ರಂತೆ ಷೆಡ್ಯೂಲ್ ಸ್ವತ್ತುಗಳಲ್ಲಿ 1/3ನೇ ಭಾಗದ ಹಿಸ್ಸೆಯನ್ನು ಕೋರಿ ಪಾಲು ವಿಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದು. ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ. ಸದರಿ ದಾವೆಯಲ್ಲಿ **ಶ್ರೀಮತಿ ವನಿತಾ ಕೋಂ ಕಿರಣಕುಮಾರ್, # 23. ಕಾಳಿಕಾದೇವಿ ಮುಖ್ಯರಸ್ತೆ, ದಾವಣಗೆರೆ** ಇವರು ಸದರಿ ದಾವೆಯಲ್ಲಿ 3ನೇ ಪ್ರತಿವಾದಿಯಾಗಿದ್ದು. ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಲು ಮತ್ತು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಆ ರೀತಿ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡುವುದಕ್ಕಾಗಲೀ ಮತ್ತು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಳ್ಳುವುದಕ್ಕಾಗಲೀ 3ನೇ ಪ್ರತಿವಾದಿಗೆ ಯಾವುದೇ ರೀತಿಯ ಸಂಪೂರ್ಣ ಹಕ್ಕು ಅಧಿಕಾರ ಇರುವುದಿಲ್ಲ.

ಆದ್ದರಿಂದ ಷೆಡ್ಯೂಲ್ ಸ್ವತ್ತುಗಳ ಸಂಬಂಧ ಮೇಲ್ಕಂಡ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ದಾವೆಯು ಅಂತಿಮ ತೀರ್ಮಾನವಾಗುವವರೆಗೂ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯುವುದಾಗಲೀ, ಜಂಟಿ ಅಭಿವೃದ್ಧಿ ಜರಾರುಪತ್ರವನ್ನು ಮಾಡಿಕೊಳ್ಳುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ, ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

**1.** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ಸ.ನಂ.185/2 ವಿಸ್ತೀರ್ಣ 34.08 ಗುಂಟೆ ಜಮೀನಿಗೆ ಚಕ್ಕುಬಂದಿ: **ಪೂರ್ವ** : ಎಸ್.ಜಿ. ರುದ್ರಪ್ಪ ಇವರ ಜಮೀನು **ಪಶ್ಚಿಮ** : ಚಂದ್ರಪ್ಪ ಮತ್ತು ಭೀಮಪ್ಪ ಇವರುಗಳ ಸ.ನಂ.185 ರಲ್ಲಿನ ಜಮೀನು **ಉತ್ತರ** : ಹಳ್ಳ **ದಕ್ಷಿಣ** : ಇದೇ ಸ.ನಂ.ನಲ್ಲಿನ ಜಮೀನು

**2.** ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಾಮನೂರು ಗ್ರಾಮದ ಸ.ನಂ.185/6 ವಿಸ್ತೀರ್ಣ 36 ಗುಂಟೆ ಜಮೀನಿಗೆ ಚಕ್ಕುಬಂದಿ: **ಪೂರ್ವ** : ಎಸ್.ಜಿ. ರುದ್ರಪ್ಪ ಇವರ ಜಮೀನು **ಪಶ್ಚಿಮ** : ಚಂದ್ರಪ್ಪ ಮತ್ತು ಭೀಮಪ್ಪ ಇವರುಗಳ ಸ.ನಂ.185 ರಲ್ಲಿನ ಜಮೀನು **ಉತ್ತರ** : ಹಳ್ಳ **ದಕ್ಷಿಣ** : ಇದೇ ಸ.ನಂ.ನಲ್ಲಿನ ಜಮೀನು

**(ಎ.ಎಂ. ಹೆಗಡೆ)**, ವಕೀಲರು
# 82/18, 1st Floor, Next to Indian Bank, P.B. Road,
DAVANGERE. Mobile : **94483 05888**




# ಕಿತ್ತೂರು ಚನ್ನಮ್ಮ ವಸತಿ ಶಾಲೆಯಲ್ಲಿ ಕಳಪೆ ಆಹಾರ : ಪೋಷಕರಿಂದ ತರಾಟೆ




ಹರಪನಹಳ್ಳಿ, ಜೂ. 21- ಗುಣಮಟ್ಟದ ಆಹಾರವನ್ನು ನೀಡಬೇಕು. ಆಹಾರ ಪದಾರ್ಥಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು ಎಂದು ಒತ್ತಾಯಿಸಿ, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿಗಳು, ಪೋಷಕರು ಅಡುಗೆಯವರು ಹಾಗೂ ಸಿಬ್ಬಂದಿಗಳಿಗೆ ತರಾಟೆಗೆ ತೆಗೆದುಕೊಂಡ ಘಟನೆ ಜರುಗಿದೆ.

ಪ್ರತಿನಿತ್ಯ ನಮಗೆ ಆಹಾರವನ್ನು ಸರಿಯಾಗಿ ಕೊಡುತ್ತಿಲ್ಲ, ಸಾಂಬಾರು ಕೆಲವೊಮ್ಮೆ ನೀರು ಇರುತ್ತದೆ. ಅನ್ನದಲ್ಲಿ ಹುಳು ಬರುತ್ತವೆ. ಈ ಬಗ್ಗೆ ಪ್ರಶ್ನೆ ಮಾಡಿದರೆ ಬೇಕಾದರೆ ಊಟ ಮಾಡಿ, ಇಲ್ಲದಿದ್ದರೆ ಬಿಡಿ ಎಂದು ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ಗದರಿಸುತ್ತಾರೆ ಎಂದು ಪೋಷಕರು ಆರೋಪಿಸಿದರು.

ಇದೇ ವೇಳೆ ಶಾಲೆಯ ದವಸ, ದಾನ್ಯಗಳ ಸಂಗ್ರಹಣೆಯನ್ನು ಪರಿಶೀಲಿಸಿದ ಪೋಷಕರು ಪಿಡಿಎಸ್ ಅಕ್ಕಿಯನ್ನು ಅನ್ನ ಮಾಡಿ ಮಕ್ಕಳಿಗೆ ನೀಡುತ್ತಾರೆ. ಬಿಲ್‌ಗಳಲ್ಲಿ ಉತ್ತಮ ಅಕ್ಕಿಯನ್ನು ನಮೂದಿಸಿರುತ್ತಾರೆ. ಹಾಲು, ಸೇರಿದಂತೆ ಇತರೆ ಪದಾರ್ಥಗಳನ್ನು ಸರಿಯಾಗಿ ನೀಡುತ್ತಿಲ್ಲ. ಅಲ್ಲದೆ ಕೆಲ ಮಕ್ಕಳಿಗೆ ಹೊಟ್ಟೆನೋವು, ವಾಂತಿಯಂತಹ ರೋಗಗಳು ಕಾಣಿಸಿಕೊಳ್ಳುತ್ತಿವೆ ಎಂದು ದೂರಿದರು.

ತುರ್ತು ಕೆಲಸದ ನಿಮಿತ್ತ ಶಾಲೆಗೆ ಗೈರಾಗಿದ್ದ ಪ್ರಾಚಾರ್ಯರ ಜೊತೆ ದೂರವಾಣಿ ಮೂಲಕ ಮಾತನಾಡಿ, ವಿದ್ಯಾರ್ಥಿಗಳ ಸಮಸ್ಯೆಗಳನ್ನು ಶೀಘ್ರ ಸರಿಪಡಿಸುವೆ, ಮುಂದೆ ಈ ರೀತಿಯಾಗದಂತೆ ಕ್ರಮವಹಿಸುವೆ, ಮುಂದೆ ಪೋಷಕರ ಸಭೆ ಕರೆಯಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪೋಷಕರಾದ ತೆಲಿಗಿ ಯೋಗೀಶ್, ಹೆಚ್.ರಾಜಪ್ಪ, ಸಿ.ಸೋಮಣ್ಣ, ಲಿಂಗರಾಜ ಹಲುವಾಗಲು, ಪಿ.ಮಂಜಪ್ಪ, ಬಿ.ಮಂಜುನಾಥ, ಸಿ. ಹಾಲೇಶ್, ಎನ್.ಕೊಟ್ರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನಿತ್ಯ ಯೋಗದಿಂದ ಮನಸ್ಸಿಗೆ ಉಲ್ಲಾಸ : ಶಾಸಕ ರಾಮಪ್ಪ



ಹರಿಹರ, ಜೂ.21- ದಿನ ನಿತ್ಯವೂ ಯೋಗ ಮಾಡುವುದರಿಂದ ಉತ್ತಮ ಆರೋಗ್ಯ, ಮನಸ್ಸಿಗೆ ಉಲ್ಲಾಸ, ನೆಮ್ಮದಿ ಜೊತೆಗೆ ಏಕಾಗ್ರತೆ ದೊರೆಯುತ್ತದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆಯುಷ್ ಇಲಾಖೆ, ತಪೋವನ ಮತ್ತು ಪ್ರಕೃತಿ ಚಿಕಿತ್ಸಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಭಾರತೀಯ ಪುರಾತತ್ವ ಇಲಾಖೆ, ತಾಲ್ಲೂಕು ಆಡಳಿತ, ಧನ್ವಂತರಿ ಪತಂಜಲಿ ಆರೋಗ್ಯ ಕೇಂದ್ರ, ಸಪ್ತರ್ಷಿ ಯೋಗ ಸ್ಪೋರ್ಟ್ಸ್ ಅಕಾಡೆಮಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಹರಿಹ ರೇಶ್ವರ ದೇವಾಲಯದ ಆವರಣದಲ್ಲಿ ಜರುಗಿದ 8 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಯೋಗದಿಂದ ಮಾನಸಿಕವಾಗಿ, ದೈಹಿಕ ವಾಗಿ ಸದೃಢವಾಗಿ ಇರುವುದರ ಜೊತೆಗೆ ಆರೋಗ್ಯವಂತ ಜೀವನ ನಡೆಸಬಹುದು. ವಿದ್ಯಾರ್ಥಿಗಳು ಯೋಗದ ಜೊತೆಗೆ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಕೊಡಬೇಕು ಎಂದರು.

ಮಾಜಿ ಶಾಸಕ ಬಿ. ಪಿ. ಹರೀಶ್ ಮಾತನಾಡಿ, ಯೋಗ ದಿಂದ ಮನಸ್ಸು ಮತ್ತು ಆರೋಗ್ಯ ಚೆನ್ನಾಗಿ ಇರುತ್ತದೆ.ವಿಶ್ವದಾದ್ಯಂತ ಇಂದು ಯೋಗ ಆಚರಣೆ ಮಾಡಲಾಗುತ್ತಿದೆ. ಆದ್ದರಿಂದ ಸರ್ವರೂ ಸಹ ದಿನ ನಿತ್ಯ ಬೆಳಗ್ಗೆ ಯೋಗ ಮಾಡುವುದನ್ನು ರೂಢಿ ಮಾಡಿಕೊಳ್ಳಬೇಕು. ಇದರಿಂದಾಗಿ ಸದೃಢ ಆರೋಗ್ಯವನ್ನು ಹೊಂದುವುದಕ್ಕೆ ದಾರಿಯಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಮಾತನಾಡಿ, ಯೋಗವು ಪ್ರತಿನಿತ್ಯ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕು. ಯೋಗದಿಂದ ಸಾಕಷ್ಟು ಅನುಕೂಲ ಆಗುತ್ತದೆ. ಈ ಕಾರ್ಯಕ್ರಮ ಯುವಕ- ಯುವತಿಯರಿಗೆ ಪ್ರೇರಣೆಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಪೋವನ ಚೇರ್ಮನ್ ಡಾ. ಶಶಿಕುಮಾರ್, ಓಂ ಶಾಂತಿ ಶಿವದೇವಿಯಮ್ಮ, ಬಿಇಓ ಬಿ.ಸಿ. ಸಿದ್ದಪ್ಪ, ತಾಪಂ ಇಓ ಗಂಗಾಧರನ್, ಪೌರಾಯುಕ್ತ ಐಗೂರು ಬಸವರಾಜ್, ತಹಶೀಲ್ದಾರ್ ಶಶಿಧರ್, ಸಪ್ತರ್ಷಿ ಯೋಗ ಸ್ಪೋರ್ಟ್ಸ್ ಅಕಾಡೆಮಿ ಅಧ್ಯಕ್ಷ ಕೆ. ಜೈಮುನಿ, ಬಿಜೆಪಿ ಮಾಜಿ ಅಧ್ಯಕ್ಷ ಹೆಚ್.ಎಂ. ಶಿವಾನಂದಪ್ಪ, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಕಸಾಪ ಜಿಲ್ಲಾ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ತುಳಜಪ್ಪ ಭೂತೆ, ಕರಿಬಸಪ್ಪ ಕಂಚಿಕೇರಿ, ಶಿವಮೂರ್ತಿ, ರಾಜು ರೋಖಡೆ, ರೇವಣಸಿದ್ದಪ್ಪ ಅಮರಾವತಿ, ಸ್ವಪ್ನ ಯೋಗ ಪಟು, ನಾಗರಾಜ್ ಮೆಹರ್ವಾಡೆ, ಸ್ವಾತಿ, ಡಾ, ವಿನಯ, ಸ್ವಪ್ನ, ಗೀತಾ ಇತರರು ಹಾಜರಿದ್ದರು.

ದೊಡ್ಡಬಾತಿ ತಪೋವನ ಕಾಲೇಜಿನ ಸುಮಾರು 200 ಕ್ಕೂ ಹೆಚ್ಚು ಮತ್ತು ಸಪ್ತರ್ಷಿ ಯೋಗ ಕೇಂದ್ರದ ವಿದ್ಯಾರ್ಥಿಗಳು ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಯೋಗದ ಅರಿವು ಮೂಡಿಸುವ ಕಾರ್ಯಕ್ರಮ ಗಮನ ಸೆಳೆಯಿತು.

# ರಾಷ್ಟ್ರಪತಿ ಚುನಾವಣೆ : ಎನ್.ಡಿ.ಎ. ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು

**(1ನೇ ಪುಟದಿಂದ)** ಹೆಸರು ಪರಿಶೀಲಿಸಿತ್ತು. ಈಶಾನ್ಯದ ಬುಡಕಟ್ಟು ಮಹಿಳೆಗೆ ಅವಕಾಶ ಕಲ್ಪಿಸಲು ನಿರ್ಧರಿಸಲಾಯಿತು ಎಂದವರು ಹೇಳಿದ್ದಾರೆ.

ಮುರ್ಮು ಅವರು ಅಪಾರ ಆಡಳಿತ ಅನುಭವ ಹೊಂದಿದ್ದು, ಅವರು ಉತ್ತಮ ರಾಷ್ಟ್ರಪತಿಯಾಗಲಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಪ್ರತಿಪಕ್ಷಗಳ ಸಾಲಿನಿಂದ ಮಾಜಿ ಕೇಂದ್ರ ಸಚಿವ ಯಶವಂತ್ ಸಿನ್ಹ ಅವರು ರಾಷ್ಟ್ರಪತಿ ಅಭ್ಯರ್ಥಿಯಾಗಿದ್ದಾರೆ. ಆದರೆ, ಎನ್.ಡಿ.ಎ. ಬಳಿ ಅಗತ್ಯ ಸಂಖ್ಯಾಬಲ ಇದೆ. ಈ ಹಿನ್ನೆಲೆಯಲ್ಲಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗುವುದು ಬಹುತೇಕ ಖಚಿತವಾಗಿದೆ. ಹಾಗಾದಲ್ಲಿ, ರಾಷ್ಟ್ರಪತಿ ಸ್ಥಾನಕ್ಕೆ ಬಂದ ಒಡಿಶಾದ ಮೊದಲ ಹಾಗೂ ಮೊದಲ ಬುಡಕಟ್ಟು ಮಹಿಳೆಯಾಗಲಿದ್ದಾರೆ. ಮುರ್ಮು ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವುದರಿಂದ ಒಡಿಶಾದಲ್ಲಷ್ಟೇ ಅಲ್ಲದೇ, ದೇಶಾದ್ಯಂತ ವಿವಿಧ ಸಮುದಾಯಗಳನ್ನು ಸೆಳೆಯಲು ನೆರವಾಗಲಿದೆ ಎಂದು ಬಿಜೆಪಿ ಭಾವಿಸಿದೆ. ಜೂನ್ 29 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ. ಜುಲೈ 18ರಂದು ಮತದಾನ ನಡೆಯಲಿದೆ ಹಾಗೂ ಜುಲೈ 21ರಂದು ಮತಗಳ ಎಣಿಕೆ ನಡೆಯಲಿದೆ.

# ಯೋಗದಿಂದ ಮನಸ್ಸಿಗೆ ವಿಶ್ವಕ್ಕೆ ಶಾಂತಿ

**(1ನೇ ಪುಟದಿಂದ)** ಆರಂಭವಾಗುವುದರಿಂದ, ಯೋಗವು ನಮ್ಮೆಲ್ಲರ ಅಂತರಾತ್ಮದ ಅರಿವು ಮೂಡಿಸುತ್ತದೆ ಎಂದರು.

ನಮ್ಮನ್ನು ಹಾಗೂ ಪ್ರಪಂಚವನ್ನು ಅರಿತಾಗ ನಮ್ಮಲ್ಲಿ ಹಾಗೂ ಪ್ರಪಂಚದಲ್ಲಿ ಆಗಬೇಕಾದ ಬದಲಾವಣೆಯ ಅರಿವಾಗುತ್ತದೆ. ಅದು ವೈಯಕ್ತಿಕ ಸಮಸ್ಯೆಗಳೇ ಇರಬಹುದು, ಪರಿಸರ ಬದಲಾವಣೆಯಂತಹ ಜಾಗತಿಕ ಸಮಸ್ಯೆಗಳೇ ಇರಬಹುದು ಮತ್ತು ಅಂತರರಾಷ್ಟ್ರೀಯ ಸಂಬಂಧಗಳೂ ಇರಬಹುದು ಎಂದು ಮೋದಿ ಹೇಳಿದರು.

ಮೈಸೂರಿನಂತಹ ಅಧ್ಯಾತ್ಮಿಕ ಕೇಂದ್ರಗಳು ಶತಮಾನಗಳಿಂದ ಯೋಗ ಬೆಳೆಸುತ್ತಾ ಬಂದಿವೆ. ಮೈಸೂರು ಅಧ್ಯಾತ್ಮದ ಹಾಗೂ ಯೋಗದ ನೆಲೆಯಾಗಿದೆ ಎಂದು ಪ್ರಧಾನಿ ಬಣ್ಣಿಸಿದರು.

ಯೋಗ ಜೀವನದ ಭಾಗವಷ್ಟೇ ಅಲ್ಲದೇ ಜೀವನದ ಮಾರ್ಗವೂ ಆಗಬೇಕಿದೆ. ಇದು ಕೇವಲ ನಿರ್ದಿಷ್ಟ ಸಮಯ ಹಾಗೂ ಸ್ಥಳಕ್ಕೆ ಸೀಮಿತವಾಗಬಾರದು ಎಂದು ತಿಳಿಸಿದರು.

ಕೆಲವೇ ವರ್ಷಗಳ ಹಿಂದೆ ಯೋಗ ಮನೆಗಳಿಗೆ ಹಾಗೂ ಅಧ್ಯಾತ್ಮಿಕ ಕೇಂದ್ರಗಳಿಗೆ ಸೀಮಿತವಾಗಿತ್ತು. ಈಗ ವಿಶ್ವದ ಪ್ರತಿಯೊಂದು ಮೂಲೆ ತಲುಪಿದೆ. ಇದು ಯೋಗದ ಮಹತ್ವ ತೋರಿಸುತ್ತದೆ ಎಂದು ಹೇಳಿದರು.

ಯೋಗ ಅಂತರರಾಷ್ಟ್ರೀಯ ಉತ್ಸವವಾಗಿದೆ. ಯೋಗ ಯಾವುದೇ ವ್ಯಕ್ತಿಗೆ ಸೀಮಿತವಾಗಿಲ್ಲ, ಇದು ಇಡೀ ಮಾನವೀಯತೆಯದ್ದಾಗಿದೆ. ಹೀಗಾಗಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಈ ವರ್ಷದ ಘೋಷ ವಾಕ್ಯ ಮಾನವೀಯತೆಗಾಗಿ ಯೋಗ ಎಂಬುದಾಗಿದೆ ಎಂದರು.

ದೇಶಕ್ಕೆ ಸ್ವಾತಂತ್ರ್ಯ ದೊರೆತ 75ನೇ ವರ್ಷಾಚರಣೆಯ ಸಂದರ್ಭದಲ್ಲಿ ಯೋಗ ದಿನ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಹೆಗ್ಗುರುತಾಗಿರುವ ತಾಣಗಳಲ್ಲಿ ಸಾಮೂಹಿಕ ಯೋಗಾಭ್ಯಾಸ ಮಾಡಲಾಗುತ್ತಿದೆ. ಇದು ದೇಶದ ಇತಿಹಾಸ, ವೈಶಾಲ್ಯತೆ ಹಾಗೂ ವೈವಿಧ್ಯತೆಯನ್ನು ಒಗ್ಗೂಡಿಸಲು ನೆರವಾಗುತ್ತದೆ ಎಂದರು.

ಯೋಗದಲ್ಲಿ ಹೊಸ ವಿಚಾರಗಳು ಹಾಗೂ ಸಾಧ್ಯತೆಗಳಲ್ಲಿ ಯುವಕರು ಭಾಗಿಯಾಗಬೇಕು ಎಂದೂ ಪ್ರಧಾನಿ ಇದೇ ಸಂದರ್ಭದಲ್ಲಿ ಕರೆ ನೀಡಿದರು.

ಯೋಗ ಕಾರ್ಯಕ್ರಮದಲ್ಲಿ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯುಷ್ ಸಚಿವ ಸರ್ಬಾನಂದ ಸೋನಾವಲ್, ಮೈಸೂರು ರಾಜಕುಟುಂಬದ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ರಾಜಮಾತೆ ಪ್ರಮೋದ ದೇವಿ ಮತ್ತಿತರರು ಪಾಲ್ಗೊಂಡಿದ್ದರು.

# ನಗರದಲ್ಲಿ ನಾಳೆ ಕೀಲು-ಮೂಳೆ, ಕಿವಿ, ಮೂಗು, ಗಂಟಲು ತಪಾಸಣೆ ಶಿಬಿರ

ದಾವಣಗೆರೆ, ಜೂ.21- ರೋಟರಿ ಕ್ಲಬ್, ದಾವಣಗೆರೆ ವಿದ್ಯಾನಗರ ಹಾಗೂ ಇನ್ನರ್‌ವ್ಹೀಲ್ ಕ್ಲಬ್ ವಿದ್ಯಾನಗರ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕೀಲು ಮೂಳೆ ಹಾಗೂ ಕಿವಿ, ಮೂಗು ಮತ್ತು ಗಂಟಲು ತಪಾಸಣಾ ಶಿಬಿರವನ್ನು ನಾಡಿದ್ದು ದಿನಾಂಕ 23 ರ ಗುರುವಾರ ಮಧ್ಯಾಹ್ನ 2.30 ಕ್ಕೆ ವಿದ್ಯಾನಗರದ ಮಾಗನೂರು ಬಸಪ್ಪ ರೋಟರಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ತಪಾಸಣಾ ಶಿಬಿರದಲ್ಲಿ ಡಾ. ಎ.ಎಂ. ಶಿವಕುಮಾರ್, ಡಾ. ನಿತೀಶ್ ಕೊಟ್ರಪ್ಪ ತಪಾಸಣೆ ನಡೆಸಲಿರುವರು. ವಿವರಕ್ಕೆ ಶ್ರೀಮತಿ ಗಿರಿಜಾ ಬಿಲ್ಲಳ್ಳಿ (94481 32627) ಮತ್ತು ಎ.ಜೆ. ರವಿಕುಮಾರ್ (88929 88989) ಅವರನ್ನು ಸಂಪರ್ಕಿಸಬಹುದು.

# ರೊಚ್ಚಿಗೆದ್ದ ರೋಸಿ ಹೋಗಿದ್ದ ಬಡಾವಣೆ ನಾಗರಿಕರು

**(1ನೇ ಪುಟದಿಂದ)** ಮಕ್ಕಳ ಓಡಾಟಕ್ಕೆ ಅಪಾಯವನ್ನುಂಟು ಮಾಡುವ ಸಾಧ್ಯತೆ ಇದೆ. ವಾಹನಗಳ ಸಂಚಾರದ ಸದ್ದು, ಕಿರಿದಾದ ತಿರುವಿನಲ್ಲಿ ಸಾಗುವಾಗ ಭಾರಿ ವಾಹನಗಳ ಹಾರ್ನ್ ಸದ್ದು ಕಿರಿಕಿರಿಯುಂಟು ಮಾಡಿ ನಿದ್ದೆ ಗೆಡಿಸಿದೆ ಎಂದು ಸ್ಥಳೀಯ ನಾಗರೀಕರು ಅಳಲಿಟ್ಟರು.

ಸ್ಥಳಕ್ಕೆ ಸಂಬಂಧಪಟ್ಟ ನಗರ ಪಾಲಿಕೆ ಸದಸ್ಯರು, ಆಯುಕ್ತರು, ಇಂಜಿನಿಯರುಗಳು ಬರುವಂತೆ ಬಿಗಿಪಟ್ಟು ಹಿಡಿದ ಬೇಸತ್ತಿದ್ದ ನಾಗರಿಕರು, ಬಡಾವಣೆಯ ಮೂರು ಭಾಗಗಳಲ್ಲೂ ಸುಮಾರು 2 ತಾಸು ಸಾರಿಗೆ ಬಸ್ ಗಳ ತಡೆದು ನಿಲ್ಲಿಸಿ ಸಂಚಾರಕ್ಕೆ ನಿರ್ಬಂಧ ಹಾಕಿದರು. ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಜನರ ಮನವಿ ಮೇರೆಗೆ ಅವಕಾಶ ನೀಡಿ ಪುನಹ ರಸ್ತೆಯಲ್ಲಿ ಬಸ್ ಸಂಚರಿಸದಂತೆ ತಾಕೀತು ಮಾಡಿದರು.

ನಗರ ಪಾಲಿಕೆ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರುಗಳು ಸ್ಥಳಕ್ಕೆ ಬಂದ ನಂತರ ತೊಂದರೆ ಬಗ್ಗೆ ಸಾರ್ವಜನಿಕರು ತರಾಟೆ ತೆಗೆದುಕೊಂಡರು. ಕೆಟಿಜೆ ನಗರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಜನರ ಮನವೊಲಿಸಿದರು.

ಸಂಬಂಧಿಸಿದ ಗುತ್ತಿಗೆದಾರರನ್ನು ಕರೆಸುವಂತೆ ಒತ್ತಾಯಿಸಿದರು. ಸ್ಥಳಕ್ಕಾಗಮಿಸಿದ ಸಂಬಂಧಿಸಿದ ಗುತ್ತಿಗೆದಾರ, ಇಂಜಿನಿಯರ್‌ಗಳ ಮಧ್ಯೆಯೇ ಕಾಮಗಾರಿ ವಿಚಾರವಾಗಿ ಮಾತಿನ ಜಟಾಪಟಿ ನಡೆದಿದೆ. ಶಿವರಾಮ ಕಾರಂತ ಉದ್ಯಾನವನದ ಮುಂಭಾಗ ತಕ್ಷಣವೇ ಬದಲಿ ವ್ಯವಸ್ಥೆ ಮುಖಾಂತರ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡುವಂತೆ ನಾಗರಿಕರು ಸಲಹೆ ನೀಡಿದರು. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಕಾರ್ಯಪಾಲಕ ಅಭಿಯಂತರ ಮನೋಹರ್ ಭರವಸೆ ನೀಡಿದ ನಂತರ ನಾಗರಿಕರು ಹೋರಾಟದಿಂದ ಹಿಂದೆ ಸರಿದರು. ಇನ್ನೆರಡು ದಿನದಲ್ಲಿ ಬದಲಿ ರಸ್ತೆ ವ್ಯವಸ್ಥೆಯಾಗದಿದ್ದರೆ ಪುನಃ ರಸ್ತೆ ತಡೆ ನಡೆಸುವುದಾಗಿ ಎಚ್ಚರಿಸಿದರು.

ರಾಜೇಂದ್ರ ಬಡಾವಣೆಯ ನಿವಾಸಿಗಳಾದ ರಂಗಸ್ವಾಮಿ, ಪ್ರವೀಣ್ ದೀಕ್ಷಿತ್, ನರಸಿಂಹಮೂರ್ತಿ, ರಘು ಸೇರಿದಂತೆ ಬಡಾವಣೆಯ ನಿವಾಸಿಗಳು ಇದ್ದರು.

**ಗುಂಡಿ ಬಿದ್ದ ರಸ್ತೆ ಸರಿಪಡಿಸದೇ ಅದರ ಮಧ್ಯೆಯೇ ಮಣ್ಣು ಹಾಕಿದ್ದಕ್ಕೆ ಆಕ್ಷೇಪ:** ರಾಜೇಂದ್ರ ಬಡಾವಣೆಯಲ್ಲಿ ಹಾಳಾದ ರಸ್ತೆಗಳಲ್ಲಿ ಗುಂಡಿ ಮುಚ್ಚಿಸಿ ವಾಹನ, ಜನರ ಓಡಾಟಕ್ಕೆ ಅನುವು ಮಾಡುವಂತೆ ಪ್ರತಿಭಟಿಸುತ್ತಿದ್ದ ಬಡಾವಣೆ ನಾಗರೀಕರ ಒತ್ತಾಯಕ್ಕೆ ಮಣಿದು ಮಣ್ಣು ತರಿಸಲಾಯಿತಲ್ಲದೇ, ಗುಂಡಿ ಬಿದ್ದ ರಸ್ತೆ ಸರಿಪಡಿಸುವ ಬದಲು ಅದನ್ನು ರಸ್ತೆ ಮಧ್ಯೆ ಹಾಕಿ ವಾಹನ, ಜನರ ಓಡಾಟ ಸಾಧ್ಯವಾಗದಂತೆ ಮಾಡಿದ್ದು ಎಷ್ಟು ಸರಿ ಎಂಬ ಆಕ್ಷೇಪವೂ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

# ನಗರದಲ್ಲಿ ನಾಳೆ ಸಿದ್ಧ ಕಣ್ಣಿನ ಹನಿ

ದಾವಣಗೆರೆ, ಜೂ.21 - ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ನಾಳೆ 23ರ ಗುರುವಾರ ಬೆಳಿಗ್ಗೆ 10 ರಿಂದ 11 ರವರೆಗೆ ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.



ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಅವರನ್ನು ಸಂಪರ್ಕಿಸಬಹುದು.

# ಡಿಪ್ಲೋಮಾ ಪ್ರವೇಶ ಅವಧಿ ವಿಸ್ತರಣೆ

ದಾವಣಗೆರೆ, ಜೂ. 21 - ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ (ಅನುದಾನಿತ ಕೋರ್ಸುಗಳು) ಪೂರ್ಣಾವಧಿಯ ಇಂಜಿನಿಯರಿಂಗ್ ಮತ್ತು ನಾನ್ - ಇಂಜಿನಿಯರಿಂಗ್ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶ ಪಡೆಯಲು ಇದೇ ದಿನಾಂಕ 30ರವರೆಗೆ ವಿಸ್ತರಿಸಲಾಗಿದೆ.

# ಆರ್ಥಿಕತೆ ಸುಧಾರಣೆಗೆ ಯೋಗ ಅಗತ್ಯ

**(1ನೇ ಪುಟದಿಂದ)** ಬರಲಾಗುತ್ತಿದೆ. ಈ ಬಾರಿ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಭಾರತದಾದ್ಯಂತ 75 ವಿವಿಧ ಪ್ರಸಿದ್ಧ ಸ್ಥಳಗಳಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದರು.

ದೈಹಿಕ, ಮಾನಸಿಕ ಆರೋಗ್ಯ ಹಾಗೂ ಯೋಗಕ್ಷೇಮಕ್ಕೆ ಯೋಗವು ಅವಶ್ಯವಾಗಿದೆ. ಹಾಗಾಗಿ ಪಾಲಕರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಯೋಗವನ್ನು ಕಲಿಸಬೇಕು. ಇದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು

ಶಾಸಕ ಮಾಡಾಳು ವಿರೂಪಾಕ್ಷಪ್ಪ ಮಾತನಾಡಿ, ಆರು ಸಾವಿರ ವರ್ಷದ ಹಿಂದೆಯೇ ಯೋಗ ಭಾರತದಲ್ಲಿ ಹುಟ್ಟಿತ್ತು ಅಂದಿನವರು ಶತಾಯುಷಿಗಳಾಗಿದ್ದರು, ಋಷಿಮುನಿಗಳು ಯೋಗದ ಮೂಲಕ ಆರೋಗ್ಯವಂತರಾಗಿದ್ದರು ಎಂದರು.

ಪಾರಂಪರಿಕ ಸ್ಥಳವಾದ ಸಂತೇಬೆನ್ನೂರು ಪುಷ್ಕರಣಿಯಲ್ಲಿ ಯೋಗದಿನಾಚರಣೆ ಹಮ್ಮಿಕೊಂಡಿರುವುದು ಹಾಗೂ ಇಂತಹ ಸ್ಥಳಗಳ ಇತಿಹಾಸ ಪರಿಚಯ ಮಾಡಿರುವುದು ಉತ್ತಮ ಕಾರ್ಯ ಎಂದರು.

ವಿಧಾನ ಪರಿಷತ್ ಸದಸ್ಯೆ ತೇಜಸ್ವಿನಿ ಗೌಡ ಮಾತನಾಡಿ, ಸನಾತನ ಕಾಲದಿಂದಲೂ ದೇಶದಲ್ಲಿ ಯೋಗ ಇತ್ತು. ಆ ದಿನಗಳು ಮತ್ತೆ ಮರುಕಳಿಸುತ್ತಿವೆ. ಆರೋಗ್ಯವೇ ದೇವರು ಯೋಗದಿಂದ ಆರೋಗ್ಯ ಸಾಧ್ಯ ಎಂದರು.

ಜಿ.ಪಂ ಸಿಇಓ ಡಾ.ಎ.ಚನ್ನಪ್ಪ ಮಾತನಾಡಿ, ಯೋಗ ಯುಕ್ತ ರೋಗ ಮುಕ್ತ ಕಾರ್ಯಕ್ರಮ ಇದಾಗಿದೆ. ಯೋಗದ ಮೂಲಕ ನಾವು ಬದುಕೋಣ, ಬದುಕಲು ಕಲಿಸೋಣ ಎಂದರು.

ಈ ವೇಳೆ ಯೋಗ ಗುರು ವೈದ್ಯಶ್ರೀ ಚೆನ್ನಬಸವಣ್ಣ ಸ್ವಾಮಿ ಯೋಗದ ಮಹತ್ವ ಸಾರುವ ಮೂಲಕ ಯೋಗಾಸನದ ವಿವಿಧ ಭಂಗಿಗಳನ್ನು ಹೇಳಿಕೊಟ್ಟರು.

ಯೋಗ ಪ್ರಾತ್ಯಕ್ಷಿಕೆಯ ಪ್ರಾರ್ಥನಾ ನೃತ್ಯದೊಂದಿಗೆ ಅಂತರ ರಾಷ್ಟ್ರೀಯ ಯೋಗಪಟು ಸೃಷ್ಟಿ ಸ್ವಾಗತ ಕೋರಿದರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಯೋಗ ದಿನಕ್ಕೆ ಶುಭ ಕೋರಿದರು.

ವೇದಿಕೆಯಲ್ಲಿ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಆಯುಷ್ ಇಲಾಖೆ ಅಧಿಕಾರಿ ಡಾ.ಶಂಕರಗೌಡ, ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್, ಎನ್.ಪರಶುರಾಮ, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ, ಸಂತೇಬೆನ್ನೂರು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶಿಲ್ಪಾ ಮರುಳಸಿದ್ದಪ್ಪ, ಚನ್ನಗಿರಿ ಪುರಸಭಾ ಅಧ್ಯಕ್ಷರಾದ ಲಕ್ಷ್ಮಿದೇವಿ, ಬಿಜೆಪಿ ಮುಖಂಡ ಮಾಡಾಳು ಮಲ್ಲಿಕಾರ್ಜುನ್, ಚನ್ನಗಿರಿ ತಹಶೀಲ್ದಾರ್ ಪಟ್ಟರಾಜು ಮತ್ತಿತರರು ಉಪಸ್ಥಿತರಿದ್ದರು.

# ಗಮನ ಸೆಳೆದ ಜಲಯೋಗ

**(1ನೇ ಪುಟದಿಂದ)** ವೆಲ್ಲಿಪಳ್ಳಿ, ಟ್ರೈನ್, ಬೋಟ್ ಸ್ಟ್ರೋಕ್, ಜಲ ವಾಚನ ಆಸನ ಸೇರಿದಂತೆ ವಿವಿಧ ಆಸನಗಳ ದೃಶ್ಯ ನೆರೆದಿದ್ದವರನ್ನು ಪುಳಕಿತಗೊಳಿಸಿದವು.

ಜಲಯೋಗ ಪರಿಣಿತ ಹರೀಶ್ ಡಿ. ನವಾಥೆ ಅವರ ನೇತೃತ್ವದ ಭೀಮನ ಕೋಣೆ ತಂಡದ ಎನ್.ಪಿ. ಗಂಗಾಧರ, ಇಂದಿರಾ, ಮಿಥಿಲಾ ಗಿರೀಶ್, ಸಂಪದ, ಆದಿತ್ಯ, ಸಂಧ್ಯಾ, ಮಮತ, ಜ್ಯೋತಿ, ವಿನಯ್ ಸೇರಿದಂತೆ ಒಟ್ಟು 26 ಜನ ಯೋಗಪಟುಗಳು ಜಲಯೋಗ ನಡೆಸಿಕೊಟ್ಟರು.

ಜಲಯೋಗ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ವಿಧಾನ ಪರಿಷತ್ ಸದಸ್ಯೆ ತೇಜಸ್ವಿನಿ ಗೌಡ, ಚನ್ನಗಿರಿ ತಾಲ್ಲೂಕಿನ ಸಂತೇಬೆನ್ನೂರಿನ ಐತಿಹಾಸಿಕ ತಾಣ ಪುಷ್ಕರಣಿಯಲ್ಲಿ ನಡೆದ ಯೋಗ ಪ್ರದರ್ಶನಕ್ಕೆ ಅಂತರಾಷ್ಟ್ರೀ ಯ ಮಾನ್ಯತೆ ಕೊಡಿಸಲು ಪ್ರಯತ್ನಿಸಲಾಗುವುದು ಎಂದರು.

ಯೋಗ ಪ್ರದರ್ಶನದ ದಾಖಲೆಗಳನ್ನು ಈಗಾಗಲೇ ದೆಹಲಿಯ ಜೆಎನ್‌ಯು ಇತಿಹಾಸ ತಜ್ಞರಿಗೆ ತಲುಪಿಸಿದ್ದೇನೆ. ಅಲ್ಲದೆ, ತಾವು ಕೈಗೊಂಡಿರುವ ನೆರೆಯ ದೇಶಗಳೊಂದಿಗೆ ಇದ್ದ ಪ್ರಾಚೀನ ಭಾರತದ ನಂಟು ವಿಷಯದ ಕುರಿತು ಅಧ್ಯಯನ ನಡೆಸುತ್ತಿದ್ದು, ಇದರಲ್ಲಿಯೂ ಸಹ ಸಂತೇಬೆನ್ನೂರಿನ ಪುಷ್ಕರಣಿಯ ಯೋಗ ಪ್ರದರ್ಶನವನ್ನು ದಾಖಲಿಸಿ, ಇದಕ್ಕೆ ಅಂತರ ರಾಷ್ಟ್ರೀಯ ಮಾನ್ಯತೆ ಕೊಡಿಸಲು ಪ್ರಯತ್ನಿಸುವುದಾಗಿ ಹೇಳಿದರು.

ಪ್ರಾಚೀನ ಭಾರತದ ಮೌಲ್ಯಗಳನ್ನು ಉಳಿಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಋಷಿಮುನಿಗಳ ಸಾಧನೆಗೆ ದಾರಿಯಾದ ಯೋಗವನ್ನು ಇಡೀ ಪ್ರಪಂಚಕ್ಕೆ ನರೇಂದ್ರ ಮೋದಿ ಕೊಂಡ್ರೊಯ್ದ ಕಾರಣ ಮುಸ್ಲಿಂ ದೇಶಗಳಲ್ಲಿಯೂ ಯೋಗ ದಿನಾಚರಣೆ ನಡೆಯುತ್ತಿದೆ ಎಂದರು.

ಉಪವಿಭಾಗಾಧಿಕಾರಿ ಶ್ರೀಮತಿ ಎನ್.ದುರ್ಗಾಶ್ರೀ ಮಾತನಾಡಿ, ಯೋಗ ದೇಹದ ಆರೋಗ್ಯ ಕಾಪಾಡುವುದರ ಜೊತೆಗೆ ಉಸಿರಾಟದ ಏರಿಳಿತದ ಮೂಲಕ ಮಾನಸಿಕ ಸದೃಢತೆಯನ್ನು ಕಾಪಾಡುತ್ತದೆ ಎಂದು ಹೇಳಿದರು.

ಜಲಯೋಗ ಪರಿಣಿತ ಹರೀಶ್ ಡಿ. ನವಾಥೆ ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಹಲವು ಮಂದಿ ಈಜು ಬಾರದೇ ನೀರಿಗಿಳಿದು ಸಾವನ್ನಪ್ಪುತ್ತಿದ್ದಾರೆ. ಅವರನ್ನು ರಕ್ಷಿಸಲು ತರಬೇತಿ ಅಗತ್ಯ. ಎನ್‌ಡಿಆರ್‌ಎಫ್‌ನಂತೆ ವಿಡಿಆರ್‌ಎಫ್ ರಚನೆ ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರಗೌಡ, ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್ ಸೇರಿದಂತೆ ಮತ್ತಿತರರಿದ್ದರು.

# ಮಲೇಬೆನ್ನೂರಿನಲ್ಲಿ ಇಂದು ವ್ಯಕ್ತಿತ್ವ ವಿಕಸನ ಕಾರ್ಯಾಗಾರ

ಒಡೆಯರ ಬಸಾಪುರ ಗ್ರಾಪಂ ವ್ಯಾಪ್ತಿಯ ಪಟೇಲ್ ಬಸಪ್ಪ ಎಜುಕೇಶನ್ ಅಸೋಸಿಯೇಶನ್ ನ ರಾಜ ರಾಜೇಶ್ವರಿ ಪ್ರೌಢಶಾಲೆಯಲ್ಲಿ ಇಂದು ಮಧ್ಯಾಹ್ನ 2.30 ಗಂಟೆಗೆ ವ್ಯಕ್ತಿತ್ವ ವಿಕಸನ ಕುರಿತು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಾಗಾರ ನಡೆಯಲಿದೆ.

ದಾವಣಗೆರೆ ಮೂಲದ ಸಂಪನ್ಮೂಲ ವ್ಯಕ್ತಿ ಎ.ಹೆಚ್ ಸಾಗರ್ ಅವರು ಉಪನ್ಯಾಸ ನೀಡಲಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ಜಿ.ಬಿ ಶಿವಾನಂದಪ್ಪ, ಪ್ರಾಂಶುಪಾಲರಾದ ಶ್ರೀಮತಿ ಸುಜಾತ ಶಿವಾನಂದಪ್ಪ, ಮುಖ್ಯೋಪಾಧ್ಯಾಯ ಎಸ್. ಶಶಿಧರ್ ಉಪಸ್ಥಿತರಿರುವರು.


## ಭಾವಪೂರ್ಣ ಶ್ರದ್ಧಾಂಜಲಿ



ಲಿಂ. ಎನ್.ಎಂ.ಜೆ.ಬಿ. ಆರಾಧ್ಯರವರ ಹಿರಿಯ ಪುತ್ರಿ
ದಿ|| ಶ್ರೀಮತಿ ವಿಜಯ ಮತ್ತು ಶ್ರೀ ಪ್ರಸನ್ನಕುಮಾರ್ ಇವರ ಪುತ್ರ

**ಶ್ರೀ ವಾಗೀಶ್ ವಿ. ಪ್ರಸನ್ನ**

(ಬೆಂಗಳೂರಿನ ಬಾಷ್ ಕಂಪನಿಯ ಇಂಜಿನಿಯರ್)


ಇವರು ದಿನಾಂಕ 21.06.2022ರ ಮಂಗಳವಾರ ನಿಧನರಾದ ವಿಷಯ ತಿಳಿದು ತುಂಬಾ ದುಃಖವಾಯಿತು. ದಯಾಮಯನಾದ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನ ಅವರ ಕುಟುಂಬ ವರ್ಗದವರಿಗೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ವಾಗೀಶ್ ಸ್ನೇಹ ಬಳಗ**



|| ಕೊಡದಗುಡ್ಡದ ವೀರಭದ್ರೇಶ್ವರ ಪ್ರಸನ್ನ ||

## ಗುರು-ಲಿಂಗ ಜಂಗಮಾರಾಧನೆ ಆಹ್ವಾನ



**ಶ್ರೀ ಮ.ನಿ.ಪ್ರ. ಮಹಾಂತರುದ್ರೇಶ್ವರ ಮಹಾಸ್ವಾಮಿಗಳು**
**ವಿರಕ್ತ ಮಠ, ಹೆಬ್ಬಾಳ್, ಇವರ ದಿವ್ಯ ಸಾನ್ನಿಧ್ಯದಲ್ಲಿ**
ದಾವಣಗೆರೆ ತಾಲ್ಲೂಕು ಗುಮ್ಮನೂರು ಗ್ರಾಮದ ವಾಸಿ
**ಶ್ರೀ ಬಕ್ಕೇಶ್ವರ ಮಠದ ಶ್ರೀಮತಿ ಪ್ರೇಮಕುಮಾರಿ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 15.06.2022ನೇ ಬುಧವಾರ ಬೆಳಿಗ್ಗೆ 6.00ಕ್ಕೆ
ನಮ್ಮ ಪೂಜ್ಯ ಪತಿಯವರಾದ

**ಶ್ರೀ ಜಿ.ಎಂ. ಉಮಾಪತಯ್ಯನವರು**

ನಿವೃತ್ತ ಮುಖ್ಯಶಿಕ್ಷಕರು
**(ಜನನ : 14.06.1946, ಮರಣ : 15.06.2022)**
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಗುರು-ಲಿಂಗ-ಜಂಗಮಾರಾಧನೆ"ಯನ್ನು**
ದಿನಾಂಕ 23.06.2022ನೇ ಗುರುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ಗುಮ್ಮನೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.


**ಇಂತಿ ದುಃಖತಪ್ತರು :**
**ಮೃತರ ಧರ್ಮಪತ್ನಿ : ಶ್ರೀಮತಿ ಪ್ರೇಮಕುಮಾರಿ ಮತ್ತು ಮಕ್ಕಳು, ಮೊಮ್ಮಕ್ಕಳು, ಮೃತರ ಸಹೋದರರು, ಅಳಿಯಂದಿರು**
**ಶ್ರೀ ನಾಗರಾಜ್ ಜಿ.ಯು., ಪ್ರಾಂಶುಪಾಲರು, ಶ್ರೀ ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯ, ಬಿ.ಇಡಿ., ಮಲ್ಲಾಡಿಹಳ್ಳಿ.**
**ಶ್ರೀ ಯೋಗರಾಜ್, ಜಿ.ಯು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಪ್ರಾ. ಕೇಂದ್ರ ತಾವರೆಕೆರೆ.**
**ಬಕ್ಕೇಶ್ವರ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 99869 06995, 99022 76970**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಮಾನಸಿಕ ಮತ್ತು ದೈಹಿಕ ಒತ್ತಡಗಳ ನಿವಾರಣೆಗಾಗಿ, ಸಂಭ್ರಮದಿಂದ ಬದುಕಲು ಹಾಗೂ ಧ್ಯಾನ ಜೀವನ ನಡೆಸಲು ಇಂದಿನಿಂದ ಇದೇ ದಿನಾಂಕ 26 ರವರೆಗೆ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಓಶೋ ಡೈನಾಮಿಕ್ ಧ್ಯಾನ ಶಿಬಿರ ನಡೆಯಲಿದೆ ಎಂದು ಅರ್ಚನಾ (9738572318), ಪುಷ್ಪ (9036719573) ತಿಳಿಸಿದ್ದಾರೆ.

## ಶತಾಯುಷಿ ಕೆಂಚಪ್ಪ ನಾಗಮ್ಮ ನಿಧನ




ದಾವಣಗೆರೆ ತಾಲ್ಲೂಕು ಐಗೂರು ಗ್ರಾಮದ ವಾಸಿ ದಿ.ಕೆಂಚಪ್ಪ ರೇವಣಸಿದ್ದಪ್ಪ ಇವರ ಧರ್ಮಪತ್ನಿ ಶತಾಯುಷಿ ಕೆಂಚಪ್ಪ ನಾಗಮ್ಮ (100) ಅವರು ದಿನಾಂಕ 21.6.2022ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.6.2022ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಐಗೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

# ರಾಣೇಬೆನ್ನೂರು : ಇಂದು ನೀರು ಇಲ್ಲ

ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಕೊಳವೆ ಕುರುಬಗೇರಿ, ಸಿದ್ಧೇಶ್ವರ ನಗರದ ಬಳಿ ಒಡೆದಿದ್ದರಿಂದ ಇಂದು ಕುಡಿಯುವ ನೀರು ಸರಬರಾಜು ಇರುವುದಿಲ್ಲ ಎಂದು ನಗರಸಭೆ ತಿಳಿಸಿದೆ.

# ದಾವಣಗೆರೆ - ಅಮರಾವತಿ ನಡುವೆ ಅಪರಿಚಿತ ಪುರುಷ ಶವ ಪತ್ತೆ

ದಾವಣಗೆರೆ, ಜೂ.21- ದಾವಣಗೆರೆ-ಅಮರಾವತಿ ಮಧ್ಯೆ ಸುಮಾರು 40 ವರ್ಷ ವಯಸ್ಸಿನ ಅಪರಿಚಿತ ಯುವಕನ ಶವ ಪತ್ತೆಯಾಗಿದೆ. ಈತ ಗೋಧಿ ಮೈಬಣ್ಣ, ತೆಳುವಾದ ಮೈಕಟ್ಟು, ಕೋಲು ಮುಖ ಹೊಂದಿರುತ್ತಾನೆ. ಮೃತನು ನೀಲಿ ಬಣ್ಣದ ತುಂಬು ತೋಳಿನ ರೆಡಿಮೇಡ್ ಶರ್ಟ್, ಕಪ್ಪು ಬಣ್ಣದ ಸಿಮೆಂಟ್ ಬಾರ್ಡರ್ ಇರುವ ಬನಿಯನ್, ಕಪ್ಪು ಬಣ್ಣದ ಚೌಕಳಿ ಗೆರೆಗಳಿರುವ ಪ್ಯಾಂಟ್ ತೊಟ್ಟಿರುತ್ತಾನೆ. ಕಪ್ಪು ಬಣ್ಣದ ಉಡುದಾರ ಹಾಕಿಕೊಂಡಿರುತ್ತಾನೆ. ಸಂಬಂಧಪಟ್ಟವರು ದಾವಣಗೆರೆ ರೈಲ್ವೇ ಪೊಲೀಸ್ ಠಾಣೆ (08192-259643, 9480802123) ಯನ್ನು ಸಂಪರ್ಕಿಸಬಹುದು.



Sri Anjanadri Education Trust (R), Davangere.
Dr.Thimmareddy Foundation P.U. College
Davangere. Mob : 9900055536, 9900077734
website : www.drthimmareddyfoundation.in
98% Residential Result
Congratulations to the Toppers of our College -2021-22
DISTINCTION = 80 | FIRST CLASS = 180 | TOTAL STRENGTH = 300
585 PAVAN KUMAR J.B. PUC - 97.50 % S.S.L.C.- 97.12%
583 BHUMIKA K.S. PUC - 97.17% S.S.L.C.- 91%
580 KAVYA C.L. PUC - 96.67% S.S.L.C.- 96.20%
579 JISHA M. SAVANTALAVAR PUC - 96.50% S.S.L.C.- 87.83%
579 RANJITHA C. GOWLI PUC - 96.50% S.S.L.C.- 94.08%
574 H. ANUSHA PUC - 95.67% S.S.L.C.- 94.72%
573 MUSKAN T. PUC - 95.50% S.S.L.C.- 94.4%
573 SAHANA T.R. PUC - 95.50% S.S.L.C.- 95.20%
573 SHREELAXMI P. KUNDAGOL PUC - 95.50% S.S.L.C.- 90.88%
572 TEJASWINI M.B. PUC - 95.33% S.S.L.C.- 95.10%
570 DARSHAN D.V. PUC - 95 % S.S.L.C.- 90.68%
569 PRASHANTH P. PUC - 94.83% S.S.L.C.- 92.96%
569 DIVYA D.A. PUC - 94-83% S.S.L.C.- 92.48%
566 ANAND SIMPIGARA PUC - 94.33% S.S.L.C.- 93.28%
565 DARSHAN R. PUC - 94.17% S.S.L.C.- 92.8%
564 DEEPA P.G. PUC - 94% S.S.L.C.- 83.2%
563 HARSHITHA S. PUC - 93.83% S.S.L.C.- 93.05%
563 PALLAVIDEVI Y. PUC - 93.83% S.S.L.C.- 87.2%
562 VENKATESHA B.N. PUC - 93.67% S.S.L.C.- 93.20%
561 MOHAN H.S. PUC - 93.50% S.S.L.C.- 93.28%
560 DEEPTHI B.R. PUC - 93.33 % S.S.L.C.- 86.6%
560 MEGHANA M. PUC - 93.33 % S.S.L.C.- 93.30%
557 ROOPA PUC - 92-83% S.S.L.C.- 90.56%
556 BINDU P. PUC - 92-67% S.S.L.C.- 92.48%
553 AMOGH R. PUC - 92.17% S.S.L.C.- 85.8%
553 ARMAN H. PUC - 92.17% S.S.L.C.- 92%
553 KANAGALI SRI HARSHITHA PUC - 92.17% S.S.L.C.- 78%
553 RAKSHITHA A. PUC - 92.17% S.S.L.C.- 92.10%
552 SHREYA V.K. PUC - 92% S.S.L.C.- 56.4%
552 PRUTHVIK R. MANJRE PUC - 92% S.S.L.C.- 84.48%
550 POOJA B.S. PUC - 91.67 % S.S.L.C.- 91.50%
558 PRIYA C.T. PUC - 91.33 % S.S.L.C.- 91.2%
547 NIRANJANA M. PUC - 91.17% S.S.L.C.- 88.8%
547 RAMESH K.N. PUC - 91.17% S.S.L.C.- 64.6%
547 ANJALI F. BENAKANAKONDA PUC - 91.17% S.S.L.C.- 91%
547 SHASHIKALA S.R. PUC - 91.17% S.S.L.C.- 91.10%
546 VANDANA M.N. PUC - 91% S.S.L.C.- 91%
545 SIDDESH T.S. PUC - 90.83% S.S.L.C.- 87.68%
544 BHOOMIKA R. PUC - 90.67% S.S.L.C.- 90.20%
543 SHIVARAJ K.R. PUC - 90.50% S.S.L.C.- 77.5%
541 NIVEDITA THULAHALLI PUC - 90.17% S.S.L.C.- 90.10%
540 AMEENA MUSKAAN PUC - 90 % S.S.L.C.- 84.8%
540 SURAKSHA P. PUC - 90 % S.S.L.C.- 90.10%
539 NIKHITHA G.R. PUC - 89.83% S.S.L.C.- 79.84%
539 SINDHU P.B. PUC - 89.83% S.S.L.C.- 89.20%
538 KAVYASHREE Y. PUC - 89.67% S.S.L.C.- 89.50%
538 AISHWARYA S.P. PUC - 89.67% S.S.L.C.- 86.88%
537 BHARATH R. BAJARADDI PUC - 89.50% S.S.L.C.- 75.6%
536 SAGAR J.S. PUC - 89.33% S.S.L.C.- 77.12%
536 MEGHANA H.B. PUC - 89.33% S.S.L.C.- 89.44%
534 NAMRATHA S.S. PUC - 89% S.S.L.C.- 74.6%
533 MANOJ C. PUC - 88.83 % S.S.L.C.- 88.50%
532 PRAJWAL K.J. PUC - 88.67 % S.S.L.C.- 80.16%
532 TEJASWINI N. PUC - 88.67 % S.S.L.C.- 90.4%
531 MEGHA S. UPPAR PUC - 88.50% S.S.L.C.- 88.20%
531 ROOPA R. PUC - 88.50% S.S.L.C.- 72%
530 RAYAZ PASHA PUC - 88.33% S.S.L.C.- 86.24%
529 MANOJ G. HADIMANI PUC - 88.17% S.S.L.C.- 88.10%
529 LAVANYA K.V. PUC - 88.17% S.S.L.C.- 87.12%
529 MUSKAN SHEKH PUC - 88.17% S.S.L.C.- 87.20%
527 NAGABHUSHAN G.Y. PUC - 87.83% S.S.L.C.- 66%
527 MANASA A.K. PUC - 87.83% S.S.L.C.-
526 THARUN S.V. NAIK PUC - 87.67% S.S.L.C.- 87.50%
525 SOUMYA M. PYATIMATH PUC - 87.50% S.S.L.C.- 87.30%
524 RITISH S. PUC - 87.33% S.S.L.C.- 84.96%
523 PRIYA G. PUC - 87.17% S.S.L.C.- 78.56%
523 RAKSHITHA C. PUC - 87.17% S.S.L.C.- 86.90%
522 SUDEEPA S.G. PUC - 87% S.S.L.C.- 73.76%
522 ASHWINI SAJJAN PUC - 87% S.S.L.C.- 62.4%
520 PRIYANKA NAYAKA PUC - 86.67% S.S.L.C.- 96%
520 REETHU M.P. PUC - 86.67% S.S.L.C.- 77.76%
519 RAGHAVENDRA P. KARJAGI PUC - 86.50% S.S.L.C.- 86.30%
519 SANDESH M. BALLARY PUC - 86.50% S.S.L.C.- 90.88%
518 CHANDAN A.G. PUC - 86.33% S.S.L.C.- 87.2%
518 AMULYA U. PUC - 86.33% S.S.L.C.- 64.6%
518 HIMA B.M. PUC - 86.33% S.S.L.C.- 86.30%
515 AISHWARYA P.B. PUC - 85.83% S.S.L.C.- 87.84%
514 GANESH B.S. PUC - 85.67% S.S.L.C.- 85.92%
512 SNEHA JADHOL PUC - 85.33% S.S.L.C.- 72.33%
511 BHUMIKA P.V. PUC - 85.17% S.S.L.C.- 86.72%
RESULT ANALYSIS
KANNADA 98.69%
ENGLISH 99.45%
HINDI 100%
URDU 100%
SANSKRIT 100%
PHYSICS 91.16%
CHEMISTRY 94.48%
MATHEMATICS 90%
BIOLOGY 92.27%
The human Mind is like a Parachute, it only works when it is open. We are here to open the young minds.

# ಮಹಾನಗರ ಪಾಲಿಕೆ ಸೂಪರ್ ಸೀಡ್‌ಗೆ ಆಗ್ರಹ

## ಅಭಿವೃದ್ಧಿಯಲ್ಲಿ ಪಾಲಿಕೆ ಸಂಪೂರ್ಣ ವಿಫಲ: ಮಂಜುನಾಥ್, ನಾಗರಾಜ್ ಆರೋಪ

ದಾವಣಗೆರೆ, ಜೂ.21- ನಗರದ ಅಭಿವೃದ್ಧಿಯಲ್ಲಿ ಮಹಾನಗರ ಪಾಲಿಕೆ ಸಂಪೂರ್ಣ ವಿಫಲವಾಗಿದೆ ಎಂದು ಪಾಲಿಕೆ ವಿಪಕ್ಷ ನಾಯಕ ಮಂಜುನಾಥ ಗಡಿಗುಡಾಳ್ ಹಾಗೂ ಎ. ನಾಗರಾಜ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ನಾಲ್ಕು ತಿಂಗಳುಗಳಾದರೂ ಕೌನ್ಸಿಲ್ ಸಾಮಾನ್ಯ ಸಭೆ ನಡೆಸದೆ ಸಮಸ್ಯೆಗಳ ಬಗ್ಗೆ ಚರ್ಚೆಗೆ ಅವಕಾಶ ನೀಡದ ಪಾಲಿಕೆಯನ್ನು ಸೂಪರ್ ಸೀಡ್ ಮಾಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಸಾಮಾನ್ಯ ನಿಧಿಯಲ್ಲಿ ವಾರ್ಡ್‌ನ ತುರ್ತು ಕಾಮಗಾರಿಗಳನ್ನು ಕೈಗೊಳ್ಳುತ್ತಿಲ್ಲ. ಬಿಜೆಪಿ ಸದಸ್ಯರ ವಾರ್ಡುಗಳಲ್ಲಿ 30-50 ಕೋಟಿ ರೂ.ಗಳ ಕಾಮಗಾರಿ ನಡೆಸಲಾಗುತ್ತಿದೆ. ಕಾಂಗ್ರೆಸ್ ವಾರ್ಡುಗಳಿಗೆ ತಾರತಮ್ಯ ನೀತಿ ಮಾಡಲಾಗುತ್ತಿದೆ ಎಂದು ಗಡಿಗುಡಾಳ್ ಮಂಜುನಾಥ್ ದೂರಿದರು.

ನಗರೋತ್ಥಾನ ಅನುದಾನದ ಕಾಮಗಾರಿ ಮಂಜೂರಾಗಿ ವರ್ಷವಾಗಿದೆ. ಅವರದ್ದೇ ಸರ್ಕಾರ ವಿದ್ದರೂ ಬದಲಾದ ಕಾಮಗಾರಿಗಳಿಗೆ ಅನುಮೋದನೆ ತರಿಸಿಕೊಳ್ಳಲಾಗದಿರುವುದು ಆಡಳಿತ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದರು.

ನೆಟ್, ಕೇಬಲ್ ಸೇರಿದಂತೆ ಇತರೆ ಕೇಬಲ್‌ಗಳನ್ನು ಬೆಸ್ಕಾಂ ಕಂಬಗಳಿಗೆ ಹಾಕಲಾಗುತ್ತಿದೆ. ರಾತ್ರಿ 11 ಗಂಟೆಯಾದರೂ ಕೇಬಲ್ ಅಳವಡಿಸಲಾಗುತ್ತಿರುತ್ತದೆ. ಪರವಾನಗಿ ಪಡೆಯದೆ ಕೇಬಲ್ ಅಳವಡಿಕೆಗೆ ಅನುಮತಿ ನೀಡಿರುವುದರಿಂದ ಕೋಟಿ ಗಟ್ಟಲೆ ಆದಾಯ ನಷ್ಟವಾಗುತ್ತಿದೆ ಎಂದು ಹೇಳಿದರು.

> **ಮಹಾನಗರ ಪಾಲಿಕೆ ದಿವಾಳಿ ಎದ್ದಿದೆ. ಚಿಕ್ಕ ಪುಟ್ಟ ಕಾಮಗಾರಿಗಳಿಗೂ ಹಣವಿಲ್ಲ. ಆಯುಕ್ತರಿಗೆ ಆರ್ಥಿಕ ಪರಿಸ್ಥಿತಿ ಸರಿದೂಗಿಸುವುದು ಗೊತ್ತಿಲ್ಲ.**
> **- ಎ.ನಾಗರಾಜ್**

ಎ.ನಾಗರಾಜ್ ಮಾತನಾಡಿ, ಪಾಲಿಕೆಯ ಮೇಯರ್ ಹಾಗೂ ಆಯುಕ್ತರಿಗೆ ಅಭಿವೃದ್ಧಿ ಬಗ್ಗೆ ಚಿಂತೆ ಇಲ್ಲ. ಪ್ರತಿ ತಿಂಗಳು ಸಾಮಾನ್ಯ ಸಭೆ ಕರೆಯಬೇಕೆಂಬ ಸರ್ಕಾರದ ಆದೇಶವನ್ನು ಪಾಲಿಸುತ್ತಿಲ್ಲ. ಸಭೆ ನಡೆಸದ ಕಾರಣಕ್ಕಾಗಿ ಬೆಳಗಾವಿ ಪಾಲಿಕೆಯನ್ನು ಡಿಸಾಲ್ವ್ ಮಾಡಲಾಗಿತ್ತು. ಅದೇ ರೀತಿ ದಾವಣಗೆರೆ ಮಹಾನಗರ ಪಾಲಿಕೆಯನ್ನು ಡಿಸಾಲ್ವ್ ಮಾಡಿ ಸೂಪರ್ ಸೀಡ್ ಮಾಡಬೇಕು ಎಂದು ಆಗ್ರಹಿಸಿದರು.

ಗ್ಲಾಸ್ ಹೌಸ್ ಬಳಿ ಕೇವಲ 1200 ಮೀಟರ್ ರಸ್ತೆಯನ್ನು 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಇಲ್ಲಿನ ಕಾಮಗಾರಿ ವಾಹನಗಳಿಂದಾಗಿ ಅಲ್ಲಿದ್ದ ಡಾಂಬರ್ ರಸ್ತೆಗಳು ಹಾಳಾಗಿವೆ. ಅವೈಜ್ಞಾನಿಕ ರಸ್ತೆ ಕಾಮಗಾರಿ ನಡೆಯುತ್ತಿದೆ ಎಂದು ಹೇಳಿದರು.

ವಿದ್ಯಾನಗರದ ಪಾಲಿಕೆಗೆ ಸೇರಿದ ಜಾಗದಲ್ಲಿ ಹತ್ತು ವರ್ಷದ ಹಿಂದಿನ ಕಾಂಪೌಂಡ್ ಅನ್ನು ಒಡೆದು ಜಾಗ ಒತ್ತುವರಿ ಮಾಡಲು ಹುನ್ನಾರ ನಡೆಸಿದ್ದು, ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೆ ಸೋಲಾರ್ ವಾಟರ್ ಅಳವಡಿಕೆಗೆ ನಿಯಮ ಪಾಲಿಸದೇ ಇರುವ ಕಿಯೋನಿಕ್ಸ್ ಸಂಸ್ಥೆಗೆ ನೀಡಿರುವ ಟೆಂಡರ್ ರದ್ದು ಮಾಡಬೇಕು. ಯುಜಿಡಿ ಕ್ಲೀನ್ ಮಾಡಲು ಯಂತ್ರಗಳು ಹಾಳಾಗಿದ್ದು, ತುರ್ತಾಗಿ ಸರಿಪಡಿಸಬೇಕು ಎಂದು ಒತ್ತಾಯಿಸಿದರು. ಸದಸ್ಯ ಇಟ್ಟಿಗುಡಿ ಮಂಜುನಾಥ್ ಮಾತನಾಡಿ, ಸರ್ಕಾರದ ಅನುಮತಿ ಪಡೆಯದೇ ಕೆಲ ಸದಸ್ಯರು ಆಶ್ರಯ ಮನೆಗಳನ್ನು ಹಂಚುತ್ತಿರುವ ಮಾಹಿತಿ ತಿಳಿದು ಬಂದಿದ್ದು, ಶೀಘ್ರವೇ ದಾಖಲೆ ಸಹಿತ ಮಾಹಿತಿ ನೀಡಲಾಗುವುದು ಎಂದರು. ಉದಯಕುಮಾರ್, ಪಾಮೇನಹಳ್ಳಿ ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿದ್ದರು.

# ಯೋಗ ಬದುಕಿನ ಭಾಗವಾಗಬೇಕು

## ಮಲೇಬೆನ್ನೂರು : ಯೋಗ ದಿನಾಚರಣೆಯಲ್ಲಿ ಬೆಣ್ಣೆಹಳ್ಳಿ ಹಾಲೇಶಪ್ಪ ಕರೆ



ಮಲೇಬೆನ್ನೂರು, ಜೂ.21- ಯೋಗ ಬದುಕಿನ ಭಾಗವಾಗಬೇಕೆಂದು ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಆಶಯ ವ್ಯಕ್ತಪಡಿಸಿದರು.

ಪಟ್ಟಣದ ನೀರಾವರಿ ಇಲಾಖೆ ಆವರಣದಲ್ಲಿ ಪತಂಜಲಿ ಯೋಗ ಸಮಿತಿ ವತಿಯಿಂದ ಇಂದು ಹಮ್ಮಿಕೊಂಡಿದ್ದ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಉತ್ತಮ ಆರೋಗ್ಯಕ್ಕಾಗಿ ನಾವು ಯೋಗವನ್ನು ಪ್ರತಿನಿತ್ಯ ಮಾಡುವುದು ಬಹಳ ಒಳ್ಳೆಯದು ಎಂದು ವೈದ್ಯರೂ ಸಹ ಹೇಳುತ್ತಾರೆ. ಅಲ್ಲದೇ ಯೋಗದಿಂದ ಆರೋಗ್ಯಕ್ಕೆ ಅಲ್ಲ ಮನಸ್ಸಿಗೂ ಶಾಂತಿ, ನೆಮ್ಮದಿ ಸಿಗುತ್ತದೆ ಎಂಬುದು ಅನೇಕರ ಅನುಭವದ ಸಲಹೆ ಆಗಿದೆ ಎಂದು ಹಾಲೇಶಪ್ಪ ಹೇಳಿದರು.

ವಿದ್ಯಾರ್ಥಿ ಭಾಸ್ಕರ್ ಮಾಡಿದ ವಿವಿಧ ಯೋಗಾಸನ ಗಮನ ಸೆಳೆಯಿತು. ಪಿಡಬ್ಲ್ಯೂಡಿ ಶಾಲೆಯ ವಿದ್ಯಾರ್ಥಿನಿಯರು ಯೋಗ ನೃತ್ಯ ಮಾಡಿದರು.

ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಪಿಎಸಿಎಸ್ ಮಾಜಿ ಅಧ್ಯಕ್ಷ ಕೆ.ಪಿ.ಗಂಗಾಧರ್, ಪುರಸಭೆ ಸದಸ್ಯೆ ಶ್ರೀಮತಿ ಮೀನಾಕ್ಷಮ್ಮ ಜಿಗಳೇರ ಹಾಲೇಶಪ್ಪ, ಬಸವ ಬಳಗದ ಅಧ್ಯಕ್ಷ ನಾರೇಶಪ್ಪ, ಪಿಡಬ್ಲ್ಯೂಡಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಮಾತನಾಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್ ಮಾತನಾಡಿ, ಯೋಗ ದಿನಾಚರಣೆಯಿಂದಾಗಿ ಎಲ್ಲರೂ ಒಂದು ಕಡೆ ಸೇರುವಂತಾಗಿದೆ. ಯೋಗ ಬಲ್ಲವನಿಗೆ ಚಿಂತೆ ಇಲ್ಲ ಎಂಬ ಮಾತು ಸತ್ಯವಾಗಿದೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್, ಬಾಲ ವಿಕಾಸ ಸಮಿತಿ ಅಧ್ಯಕ್ಷೆ ಮಾನಸ ಸತೀಶ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ವಾಸವಿ ರಮೇಶ್ ಮತ್ತು ಪೂಜಾರ್ ನಾರಾಯಣಪ್ಪ, ಸೌಮ್ಯ, ಮಂಜುಳಾ ಸೇರಿದಂತೆ ಅಕ್ಕನ ಬಳಗದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅಂಗನವಾಡಿ ಶಿಕ್ಷಕಿ ಶ್ರೀಮತಿ ಮಂಜುಳಾ ಯೋಗಾಭ್ಯಾಸ ಮಾಡಿಸಿದರು.

# ಯೋಗದಿಂದ ರೋಗ ಮುಕ್ತ ಜೀವನ ಸಾಧ್ಯ : ನೀಲಪ್ಪ



ದಾವಣಗೆರೆ, ಜೂ. 21- ಯೋಗ ಮಾಡುವ ಮೂಲಕ ರೋಗ ಮುಕ್ತ ಜೀವನ ನಡೆಸಲು ಸಾಧ್ಯ ಎಂದು ಯೋಗ ಶಿಕ್ಷಕ ಬಿ.ಎಸ್ ನೀಲಪ್ಪ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಇಂದು ಏರ್ಪಡಿಸಿದ್ದ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಮನುಕುಲದ ಮಾನಸಿಕ-ದೈಹಿಕ ಸದೃಢತೆಗಾಗಿ ಹಿರಿಯರು ಕೊಟ್ಟು ಹೋಗಿರುವ ಯೋಗಕ್ಕೆ ಈಗ ವಿಶ್ವ ಮನ್ನಣೆ ದೊರೆತಿದೆ. ಏಕಾಗ್ರತೆ ಮತ್ತು ಬೆಳವಣಿಗೆಗೆ ಇದು ಹೆಚ್ಚು ಪರಿಣಾಮಕಾರಿ ಎಂದರು.

